# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.123/2022

**PW**:1

**ದಿನಾಂಕ 15.07.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಎಸ್.ವಿ.ಕೆ. ವಕೀಲರಿಂದ:**

1 ಮತ್ತು 2 ನೇ ಪ್ರತಿವಾದಿಯರಿಗೆ ಎಷ್ಟು ಜನ ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಆದರೆ 1 ಮತ್ತು 2 ನೇ ಪ್ರತಿವಾದಿಯರು ಸಹೋದರರು ಇರುತ್ತಾರೆ. ನಾನು ಬಳ್ಳೊಳ್ಳಿ ಗ್ರಾಮದಲ್ಲಿ ವಾಸಿಸುತ್ತೇನೆ. ನಾನು ಪ್ರತಿವಾದಿಯರಿಗೆ ಸಂಬಂಧಿಕನು ಆಗಬೇಕು ಎಂದರೆ ಸರಿ. 1 ನೇ ಪ್ರತಿವಾದಿ ಬಳ್ಳೊಳ್ಳಿ ಗ್ರಾಮದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಅವರ ಅಕ್ಕನ ಹತ್ತಿರ ಬೇರೆ ಊರಿನಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ 2011 ನೇ ಇಸವಿಯಿಂದ ಮಾನಸಿಕ ಕಾಯಿಲೆ ಇರುತ್ತದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಮಾನಸಿಕ ಆಸ್ಪತ್ರೆ ಧಾರವಾಡ ಇವರು 1 ನೇ ಪ್ರತಿವಾದಿಗೆ ಮಾನಸಿಕ ಕಾಯಿಲೆ 2011 ನೇ ಇಸವಿಯಿಂದ ಇರುತ್ತದೆ ಎಂದು ವೈದ್ಯಕೀಯ ದಾಖಲೆಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 1 ನೇ ಪ್ರತಿವಾದಿಯು ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವುದು ನನಗೆ ಗೊತ್ತಿದ್ದರು 2 ನೇ ಪ್ರತಿವಾದಿಯ ಜೊತೆ ಕರೆದುಕೊಂಡು ಬಂದು ಆತನಿಗೆ ಖರೀದಿ ಕರಾರಿನ ಬಗ್ಗೆ ಯಾವುದೇ ವಿಷಯವನ್ನು ತಿಳಿಸದೇ ಮೋಸದಿಂದ ನಿ.ಪಿ.3 ನ್ನು ಸೃಷ್ಠಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಯಾವುದೇ ಪ್ರಾಪಂಚಿಕ ಅಡಚಣೆ ಬಂದಿರಲಿಲ್ಲ ಮತ್ತು ದಾವಾ ಆಸ್ತಿಯನ್ನು ಮಾರಾಟ ಮಾಡುವ ಪ್ರಮಯ ಬಂದಿರಲಿಲ್ಲ ಎಂದರೆ ಸರಿಯಲ್ಲ. ಈ ಮುಂಚೆ ಕೂಡ ನನ್ನವು ದಾವೆಗಳು ಇದ್ದವು ಎಂದರೆ ಸರಿಯಲ್ಲ. ಈ ದಾವೆ ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ಪ್ರತಿವಾದಿಯರಿಗೆ ಖರೀದಿ ಕರಾರಿನ ಬಾಕಿ ಹಣವನ್ನು ಕೊಡಲು ನಾನು ಇಟ್ಟುಕೊಂಡಿರುತ್ತೇನೆ ಎಂದು ದಾವಾ ಪತ್ರದಲ್ಲಿ ಬರೆಸಿಲ್ಲ. ನಾನು ಬಾಕಿ ಹಣವನ್ನು ಪ್ರತಿವಾದಿಯರಿಗೆ ಕೊಡಲು ಹೋದಾಗ ಅವರು ಆ ಹಣವನ್ನು ತೆಗೆದುಕೊಳ್ಳಲು ತಯಾರಿಲ್ಲವೆಂದು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ನನ್ನ ಸ್ವಂತ ಹಣದಿಂದ ಖರೀದಿ ಮಾಡಿಕೊಳ್ಳಲು ತಯಾರಿರುತ್ತೇನೆ ಎಂದು ವಾದ ಪತ್ರದಲ್ಲಿ ಬರೆಸಿರುತ್ತೇನೋ ಅಥವಾ ಏನು ಮಾಡಿರುತ್ತೆನೋ ಎಂದು ನನಗೆ ಈಗ ನೆನಪಿಲ್ಲ. 11-ಇ ನಕ್ಷೆಗೆ ಅರ್ಜಿ ಕೊಟ್ಟಿರುವ ನಕಲು ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಖರೀದಿ ಕರಾರು ಪತ್ರ ಆದ ನಂತರ ಒಂದು ತಿಂಗಳ ನಂತರ 11-ಇ ನಕ್ಷೆಗೆ ಅರ್ಜಿ ಮಾಡಿರುತ್ತೇನೆ. ಇಲ್ಲಿಯತನಕ 11-ಇ ನಕ್ಷೆ ತಯಾರು ಆಗಿದೆಯೋ ಅಥವಾ ಇಲ್ಲವೋ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆಗಿದೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸಿದ ನಂತರ

11-ಇ ನಕ್ಷೆ ಆಗಿರುತ್ತದೆ. ಸದರಿ 11-ಇ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿಯ ಜೊತೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಮತ್ತು ಅವನು ಯಾವುದೇ ಆಸ್ತಿಯನ್ನು ನನಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2019 ನೇ ಇಸವಿಯಲ್ಲಿ ಪ್ರತಿವಾದಿಯರ ಸಹೋದರಿ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ.10/2019 ರಂತೆ ದಾವೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ 1 ನೇ ಪ್ರತಿವಾದಿಯ ಆಸ್ತಿಯನ್ನು ಎತ್ತಿ ಹಾಕಬೇಕೆನ್ನುವ ದುರುದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.